

ಹೊಂದಿದೆ. ಹಲವಾರು ದೇವ ದೇವತೆಗಳ, ಋಷಿ ಮುನಿಗಳ, ಪ್ರಾಣಿಗಳ ಉಬ್ಬು ಶಿಲ್ಪಗಳು ನೋಡುಗರನ್ನು ಅಚ್ಚರಿಗೊಳಿಸುತ್ತವೆ. ಎಲ್ಲಾ ದೇವಾಲಯಗಳಲ್ಲಿ ಇರುವಂತೆ ಇಲ್ಲಿಯೂ ಸಹ ಕಾಮ ಶಾಸ್ತ್ರವನ್ನು ಬೋಧಿಸುವ ಹಲವಾರು ಭಂಗಿಗಳ ಲೈಂಗಿಕ ಶಿಲ್ಪಗಳಿವೆ.

ಇಲ್ಲಿ ಕಾಣಬಹುದಾದ ಶಿಲ್ಪಗಳಲ್ಲಿ ಪ್ರಮುಖವಾದವುಗಳೆಂದರೆ: ರಾಮಾಯಣಕ್ಕೆ ಸಂಬಂಧಿಸಿದಂತೆ ಸೀತಾಮಾತೆಯನ್ನು ಹುಡುಕಿಕೊಂಡು ಹೋದ ಹನುಮಂತ ಅಶೋಕವನದಲ್ಲಿ ಸೀತೆಯನ್ನು ಭೇಟಿಯಾಗುವ ದೃಶ್ಯ, ಶ್ರೀ ರಾಮನ ಪಟ್ಟಾಭಿಷೇಕವನ್ನು ವೀಕ್ಷಿಸುತ್ತಿರುವ ಪ್ರಜೆಗಳು, ಪನ್ನಗ ಶಯನನಾದ ವಿಷ್ಣುವಿನ ಸೇವೆ ಮಾಡುತ್ತಿರುವ ಲಕ್ಷ್ಮೀ, ಪಂಚಮುಖಿ ಆಂಜನೇಯ, ವಿರಳವಾಗಿ ಕಾಣಸಿಗುವ ಹತ್ತು ತಲೆ ಹಾಗೂ 20 ಬಾಹುಗಳನ್ನು ಹೊಂದಿರುವ ರಾವಣ, ಮಹಾಭಾರತದ ಯುದ್ಧಕ್ಕೆ ಹೋಗುತ್ತಿರುವ ಸೈನಿಕರು ಮುಂತಾದವು.

ಹಿರಣ್ಯ ಕಶಿಪುವನ್ನು ವಧಿಸುತ್ತಿರುವ ಉಗ್ರ ನರಸಿಂಹ, ಶಿವಪುರಾಣದಲ್ಲಿ ಉಲ್ಲೇಖಿಸಲಾದ ಬ್ರಹ್ಮ ಕಪಾಲದ ಘಟನೆ, ಶಿವಲಿಂಗಕ್ಕೆ ತನ್ನ ಕೆಚ್ಚಲಿನಿಂದಲೇ ಹಾಲನ್ನು ಹಿಂಡಿ ಅಭಿಷೇಕ ಮಾಡುತ್ತಿರುವ ಕಾಮಧೇನು, ಪಂಚ ತಂತ್ರ ಕತೆಗಳಲ್ಲಿ ಒಂದಾದ ಮಾವಿನ ಮರದಲ್ಲಿ ವಾಸವಾಗಿದ್ದ ಕೋತಿಯ ಗೆಳೆತನ ಮಾಡಿದ ಮೊಸಳೆ ಮಾವಿನ ಹಣ್ಣುಗಳನ್ನು ತಿಂದು ಕೊನೆಗೆ ಕೋತಿಯನ್ನೇ ತಿನ್ನಲು ಸಂಚು ಹೂಡುವ ಕೋತಿ ಮತ್ತು ಮೊಸಳೆಯ ಕತೆಯ ಸಾರಾಂಶವನ್ನು ತಿಳಿಸುವ ಶಿಲ್ಪಗಳು ಕೂಡಾ ನಯನಮನೋಹರವಾಗಿವೆ. ರೆಕ್ಕೆಗಳನ್ನು ಹೊಂದಿರುವ ಆನೆ, ಕುದುರೆ ಮೊದಲಾದ ಪ್ರಾಣಿಗಳ ಶಿಲ್ಪಗಳು, ಗಂಡು ಹೆಣ್ಣು ಪರಸ್ಪರ ಕೈ ಕಾಲುಗಳನ್ನು ಹಿಡಿದುಕೊಂಡು ಗಾಲಿಯಂತೆ ಉರುಳುವ ಮಾನವ ಚಕ್ರ, ಕರ್ನಾಟಕ ಸರಕಾರದ ಲಾಂಛನವಾದ ಕಾಲ್ಪನಿಕ ಪಕ್ಷಿ ಗಂಡಬೇರುಂಢ, ಮರದ ಕೊಂಬೆಯಲ್ಲಿ ಕುಳಿತಿರುವ ಹದಿನಾಲ್ಕು ಗಿಣಿಗಳು – ಅತ್ಯಂತ ಸೂಕ್ಷ್ಮವಾಗಿ ಗಮನಿಸಿದಲ್ಲಿ ಮಾತ್ರ ಕಾಣಿಸುವಂತೆ ಕೆತ್ತಿರುವ ರಚನೆಗಳಾಗಿದ್ದು ಶಿಲ್ಪಿಯ ಕಲಾಪ್ರೌಢಿಮೆಗೆ ಸಾಕ್ಷಿಯಾಗಿದೆ. ಜ್ಯೋತಿಷ್ಯ ಶಾಸ್ತ್ರದ ನವಗ್ರಹ ಕುಂಡಲಿ, ದ್ವಾದಶ ರಾಶಿ ಚಕ್ರ, ಯಕ್ಷ ಯಕ್ಷಿಯರು ಮುಂತಾದ ಉಬ್ಬುಚಿತ್ರಗಳು ನೋಡುಗರನ್ನು ಬೆರಗುಗೊಳಿಸುತ್ತವೆ.

ಹೀಗೆ ರಾಮಾಯಣ, ಮಹಾ ಭಾರತ, ಶಿವ ಪುರಾಣ, ಜಾನಪದ, ಜ್ಯೋತಿಷ್ಯ ಮುಂತಾದವುಗಳಿಗೆ ಸಂಬಂಧಿಸಿದ ಉಬ್ಬು ಶಿಲ್ಪಗಳು ಒಂದೇ ದೇವಾಲಯದಲ್ಲಿ ನೋಡಲು ಸಿಗುವುದು ವಿರಳವೆಂದೇ ಹೇಳಬಹುದು.


# BANGALORE EDUCATION CENTRE (R)

TOWARDS ENLIGHTENMENT

No.49, 2nd Floor, Airport Road, Near CBI Office,
Ganganagar, Bengaluru-560024

## ATTENTION: I PUC, XI std. SCIENCE STUDENTS
## COACHING FOR II PUC, XII std. AT BENGALURU
## DURING SUMMER VACATION

**By experts with over 30 years of experience**

**Get coaching by most experienced and inspiring professors at Bengaluru, the capital city**

- Coaching by Professors with proven track record
- Scientifically designed coaching program
- Well prepared study material by the teaching Professors
- Use of technology for better understanding
- Spacious class room and infrastructure
- Practical classes for P, C, B subjects
- Cool environment of garden city for pleasant summer study

**For enquiry and admissions call**
**Mobile: 9480069993 or E-mail to bec.bg24@gmail.com**